ಮಂತ್ರಿಗಳಾಗಿದ್ದಾಗ, ಸಾಂಕ್ಷ್ಯ ಆಗಿದೆಯೆಂದು ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಡಾ॥ ಆರ್. ನಾಗನಗೌಡ.—ಅದನ್ನು ವಿಚಾರಿಸುತ್ತೇನೆ.

ಶ್ರೀ ಟಿ. ನಾಗಪ್ಪ.—ಉದ್ದೇರು, ಶಾಂತವೇರಿ, ಕಾಮನದುರ್ಗ ಮತ್ತು ಸಿದ್ದವಬಿಲೆ ಗ್ರಾಮಗಳ ಕೆಲಸ ಕಂಪ್ಲೀಟಾಗಿದೆಯೆ ?

ಡಾ॥ ಆರ್. ನಾಗನಗೌಡ.—ಇಲ್ಲ. ಅದು ಇನ್ನೂ ಎಸ್ಟಿಮೇಟ್ ಸ್ಟೇಜಿನಲ್ಲೇ ಇದೆ.

ಶ್ರೀ ಟಿ. ನಾಗಪ್ಪ.—ಅದು ಮಂಜೂರಾಗಿ ಬಹಳ ದಿವಸವಾಯಿತು, ವಿಚಾರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ. (*c*) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಅದಕ್ಕೆ ಅಂದಾಜು ಮಂಜೂರಾಗಿಲ್ಲವೆಂದು ಹೇಳಿದೆ. ಅದಕ್ಕೆ ರಿಟರ್ನ್ ಬಹಳ ಕಡಮೆಯಿರಬೇಕು.

ಶ್ರೀ ಟಿ. ನಾಗಪ್ಪ.—ಇದನ್ನು ಜಾಗ್ರತೆ ಮಾಡುವಿರಾ ?

ಡಾ॥ ಆರ್. ನಾಗನಗೌಡ.—ಪರಿಶೀಲಿಸಲಾಗುವುದು.

Posts higher than Veterinary Inspectors in Animal Husbandry Department.

Q.—113. Sri H. S. RUDRAPPA (Honnali).—

Will the Government be pleased to state :—

(*a*) how many gazetted and non-gazetted posts, higher than the cadre of Veterinary Inspectors, are there in the Animal Husbandry Department ;

(*b*) how many of them were vacant in the month of November 1953 ;

(*c*) the steps taken to fill up the vacancies ;

(*d*) how many officers of this Department were holding tenure appointments under the Animal Husbandry Department and other departments in gazetted cadre on 1-10-53 and what are their services in the gazetted cadre ?

A.—Dr. R. NAGAN GOWDA (Minister for Agriculture).—

(*a*) Gazetted : 27. Non-gazetted: 2.

(*b*) Three.

(*c*) Proposals for filling up the vacant posts are under consideration.

(*d*) Four :

(i) Five years, three months and one day.

(ii) Two years and 11 months.

(iii) Do

(iv) One year and two months.

Sri H. S. RUDRAPPA.—I have no supplementaries.

ಶ್ರೀ ಎಸ್. ಎಂ. ಮರಿಯಪ್ಪ.—1950 ರಿಂದೀಚೆಗೆ ಈ ಇಲಾಖೆಯಲ್ಲಿ ಹೆಚ್ಚು ಪರಿಶ್ರಮ ಹೊಂದಲು ಯಾರನ್ನಾದರೂ ಹೊರದೇಶಕ್ಕೆ ಕಳುಹಿಸಿದ್ದಿರಾ ?

ಡಾ॥ ಆರ್. ನಾಗನಗೌಡ.—ಹೋಗಿ ಬಂದವರು ಕೆಲವರಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಆ ಅಧಿಕಾರಿಗಳು ಈಗ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆಯೆ ?

ಡಾ॥ ಆರ್. ನಾಗನಗೌಡ.—ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಹೊರದೇಶಕ್ಕೆ ಹೋಗಿ ಬಂದವರಲ್ಲಿ ಎಷ್ಟು ಜನ ಹಾಗೆ ಕೆಲಸ ಮಾಡುತ್ತಿಲ್ಲ ?

ಡಾ॥ ಆರ್. ನಾಗನಗೌಡ.—ಆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಇಲ್ಲದಿರುವವರು ಯೂನಿವರ್ಸಿಟಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಸ್. ಎಂ. ಮರಿಯಪ್ಪ.—ಅವರನ್ನು ಹೊರದೇಶಕ್ಕೆ ಕಳುಹಿಸಿದ್ದ ಉದ್ದೇಶ ಸಾರ್ಥಕವಾಗುವುದಕ್ಕೆ ಪುನಃ ಅವರನ್ನು ಆ ಇಲಾಖೆಯಲ್ಲಿ ಕೆಲಸ ಮಾಡುವಂತೆ ಹೇಳಬೇಕಾದದ್ದು ಸೂಕ್ತವಲ್ಲವೆ ?

ಡಾ॥ ಆರ್. ನಾಗನಗೌಡ.—ಹೆಸರುಗಳನ್ನು ಹೇಳಿದರೆ ನಾನು ವಿಚಾರಿಸುತ್ತೇನೆ. There is nothing private or secret about it.

ಶ್ರೀ ಎಸ್. ಗೋಪಾಲಗೌಡ.—ಈಗ 27 ಗೆಜೆಟೆಡ್ ಹುದ್ದೆಗಳಿವೆಯೆಂದು ಉತ್ತರ ಕೊಟ್ಟಿದೆ. ಆ ಹುದ್ದೆಗಳು ಸಂಸ್ಥಾನದಲ್ಲಿರುವ ಪಶುಗಳ ಸಂಖ್ಯೆಗನುಸಾರವಾಗಿವೆಯೇ ?

ಡಾ॥ ಆರ್. ನಾಗನಗೌಡ.—ನಮಗೆ ಬೇಕಾದಷ್ಟು ಇನ್‌ಸ್ಪೆಕ್ಟರುಗಳಿದ್ದಾರೆ. They are in close contact with the working and they are doing their work.

ಶ್ರೀ ಎಸ್. ಗೋಪಾಲಗೌಡ.—ಪಶುಪಾಲನೆಗೆ ಈ ಗೆಜೆಟೆಡ್ ಹುದ್ದೆಗಳ ಅವಶ್ಯಕತೆಯಿದೆಯೆ ?

ಡಾ॥ ಆರ್. ನಾಗನಗೌಡ.—ಇದೆ.

ಶ್ರೀ ಎಸ್. ಗೋಪಾಲಗೌಡ.—ಅವರು ಸಾಮಾನ್ಯವಾಗಿ ಯಾವರೀತಿ ಕೆಲಸವನ್ನು ನಡೆಸುತ್ತಾರೆ ?

Mr. DEPUTY SPEAKER.—In accordance with the rules of Government.

ಶ್ರೀ ಬಿ. ರಾಚಯ್ಯ.—ಈ ಇಲಾಖೆಯಿಂದ ಹೊರದೇಶಕ್ಕೆ ಎಷ್ಟು ಮಂದಿಯನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದೆ ?

ಡಾ॥ ಆರ್. ನಾಗನಗೌಡ.—ಎಂಟು ಹತ್ತು ಮಂದಿ ಹೋಗಿ ಬಂದಿರಬಹುದು, ಜ್ಞಾಪಕವಿಲ್ಲ.

ಶ್ರೀ ಬಿ. ರಾಚಯ್ಯ.—ಅದರಲ್ಲಿ ಯೂನಿವರ್ಸಿಟಿಯಲ್ಲಿ ಎಷ್ಟು ಜನರಿದ್ದಾರೆ ?

ಡಾ॥ ಆರ್. ನಾಗನಗೌಡ.—ಇಬ್ಬರು. ಒಬ್ಬರ ಹೆಸರು ನಾರಾಯಣರಾವ್, ಇನ್ನೊಬ್ಬರ ಹೆಸರು ಜ್ಞಾಪಕವಿಲ್ಲ.